ಆಶ್ರಯ ಯೋಜನೆಯಡಿ ಫಲಾನುಭವಿಗಳಿಗೆ ವಿದ್ಯುತ್ ದೀಪದ ಸೌಲಭ್ಯ

3512(3833) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿ ವಸತಿ ಸೌಲಭ್ಯ ಪಡೆದ ಫಲಾನುಭವಿಗಳಿಗೆ ಸರಕಾರದ ವತಿಯಿಂದಲೇ ವಿದ್ಯುತ್ ದೀಪದ ಸೌಕರ್ಯ ನೀಡಲು ಕ್ರಮ ಕೈಗೊಂಡಿದೆಯೇ;

ಆ) ಹಾಗಿದ್ದಲ್ಲಿ, ಇದರ ಬಗೆಗಿನ ವಿವರಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಕೇಂದ್ರ ಸರ್ಕಾರದ ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ ಪ್ರತಿ ಮನೆಗೆ ರೂ. 1500/–ಗಳ ಮಿತಿಗೊಳಪಟ್ಟು ವಿದ್ಯುತ್ ಸಂಪರ್ಕ ಒದಗಿಸಲು ಯೋಜಸಲಾಗಿದೆ.

ಆ) ರೂ. 1500/–ರಲ್ಲಿ ರೂ. 1250 ನ್ನು KPTCL ಗೆ ಮತ್ತು ರೂ. 250/–ಗಳನ್ನು ಫಲಾನುಭವಿಗಳಿಗೆ ಈ ಕೆಳಗಿನ ಬಾಬ್ತಿಗಾಗಿ ನೀಡಲಾಗುತ್ತದೆ:

KPTCL ಗೆ

1.	ಒಂದು ವಿದ್ಯುತ್ ಸರಬರಾಜು ಮೀಟರ್	ರೂ. 700
2.	ಮೀಟರ್ ಬೋರ್ಡಗೆ ಸರ್ವೀಸ್ ಮೈನ್‌ನ ಅವಕಾಶ ಕಲ್ಪಿಸುವುದು	ರೂ. 450
3.	ವಿದ್ಯುತ್ ಸಂಪರ್ಕಕ್ಕಾಗಿ ಠೇವಣಿ	ರೂ. 100
	ಒಟ್ಟು	**ರೂ. 1250**

A. ಫಲಾನುಭವಿಗಳಿಗೆ

ಇನ್ನುಳಿದ ರೂ. 250/–ನ್ನು ಪ್ರತಿ ಫಲಾನುಭವಿಗೆ ಈ ಕೆಳಗಿನ ಕೆಲಸಗಳನ್ನು ನಿರ್ವಹಿಸುವ ಸಲುವಾಗಿ ನೀಡಲಾಗುವುದು.

1. ಫಲಾನುಭವಿಗಳು ತಮ್ಮ ಮನೆಯ ಒಳಭಾಗಕ್ಕೆ ಒಂದು ವಿದ್ಯುತ್ ಪಾಯಿಂಟ್ ಸಹಿತ ಮೀಟರ್‌ವರೆವಿಗೆ ವೈರಿಂಗ್ ಮಾಡಿಸಲು
2. 2.5 ಮೀಟರ್ ಉದ್ದದ ಜೆ.ಐ. ಪೈಪಿನಲ್ಲಿ ಅರ್ಥಿಂಗ್ ಮಾಡಿಸಲು ಮತ್ತು
3. ಮೈನ್ ಸ್ವಿಚ್ ಸಹಿತ ಮೀಟರ್ ಬೋರ್ಡ್ ಮತ್ತು MCBಗೆ ಜಾಗ ಕಲ್ಪಿಸುವುದು

ರಾಜ್ಯದಲ್ಲಿ ಶಾಲಾಭಿವೃದ್ಧಿ ಸಮಿತಿಗಳ ರಚನೆ

3513(4079) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ಪ್ರತಿ ಗ್ರಾಮದಲ್ಲಿರುವ ಪ್ರಾಥಮಿಕ ಶಾಲೆಗಳಿಗೆ ಶಾಲಾಭಿವೃದ್ಧಿ ಸಮಿತಿಗಳನ್ನು ರಚಿಸಲಾಗಿದೆಯೇ; ಈ ಸಮಿತಿಗಳಲ್ಲಿ ಯಾವ ಅರ್ಹತೆ ಆಧಾರದ ಮೇಲೆ ಪದಾಧಿಕಾರಿಗಳನ್ನು ನೇಮಕ ಮಾಡಲಾಗುವುದು;

ಆ) ಸದರಿ ಸಮಿತಿಯ ಕರ್ತವ್ಯಗಳೇನು;

ಇ) ಎಷ್ಟು ಶಾಲೆಗಳಲ್ಲಿ ಈ ಸಮಿತಿಗಳನ್ನು ರಚಿಸಲಾಗಿಲ್ಲ; ಕಾರಣಗಳೇನು?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ: ಇಡಿ 1 ಪಿಬಿಎಸ್ 2001 ದಿ: 28–ಜೂ–2001 ರಂತೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸಲಾಗುತ್ತಿದೆ.

ಪ್ರತಿಯೊಂದು ಶಾಲೆಗೂ ಒಂದು ಪೋಷಕ ಸಮಿತಿ ಇರುತ್ತದೆ. ಈ ಸಮಿತಿಯು 9 ಜನ ಪೋಷಕ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತದೆ. ಸಮಿತಿಯ ಅಧ್ಯಕ್ಷರ ಹೆಸರನ್ನು ಸ್ಥಳೀಯ ವಿಧಾನ ಸಭಾ ಸದಸ್ಯರು ನಾಮನಿರ್ದೇಶನ ಮೂಲಕ ಅನುಮೋದಿಸುತ್ತಾರೆ.

ಆ) 1. ಶಾಲೆಯ ವ್ಯಾಪ್ತಿಯಲ್ಲಿನ, ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲು ಮಾಡುವಂತೆ ಪೋಷಕರಲ್ಲಿ ಅರಿವು ಮೂಡಿಸುವುದು ಹಾಗೂ ಆ ರೀತಿ ದಾಖಲಾದ ಮಕ್ಕಳನ್ನು ನಿಯಮಿತವಾಗಿ ಶಾಲೆಗೆ ಕಳುಹಿಸುವಂತೆ ಮಾಡುವುದು.

2. ಶಾಲೆಯ ವ್ಯಾಪ್ತಿಯಲ್ಲಿರುವ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು ದಾಖಲಾತಿ ಆಂದೋಲನ, ಬ್ರಿಜ್ಜ್ ಕೋರ್ಸ್ ಚಿಣ್ಣರ ಅಂಗಳ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುವುದು. ಶಾಲೆಯಿಂದ ಹೊರಗುಳಿದ ಮಕ್ಕಳ ಯಾದಿಯನ್ನು ತಯಾರಿಸಿ ಸಾರ್ವಜನಿಕ ಸ್ಥಳಗಳಾದ ಶಾಲೆ, ಚಾವಡಿ, ಗ್ರಾಮ ಪಂಚಾಯಿತಿ, ಸಮುದಾಯ ಭವನ ಇತ್ಯಾದಿಗಳಲ್ಲಿ ಪ್ರಸಿದ್ಧಿ ಪಡಿಸುವುದು.

3. ಶಾಲೆಯಲ್ಲಿ ಓದುವ ಎಲ್ಲಾ ಮಕ್ಕಳು ನಿರ್ದಿಷ್ಟ ಗುಣಮಟ್ಟದ ಕಲಿಕೆ ಪಡೆಯಲು ಬೇಕಾದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

4. ಶಾಲೆಯ ಆವರಣವನ್ನು ಹಾಗೂ ಕಟ್ಟಡವನ್ನು ಅತಿಕ್ರಮಣ ಹಾಗೂ ವಿನಾಶಗಳಿಂದ ಕಾಪಾಡುವುದು.

5. ವೇಳಾಪಟ್ಟಿಯಂತೆ ಪ್ರತಿ ವರ್ಷ 220 ಕಲಿಕಾ ದಿನಗಳು ಮತ್ತು ಪ್ರತಿ ದಿನ ಐದುವರೆ ಗಂಟೆಗಳ ಶಾಲೆ ನಡೆಸುವುದನ್ನು ಖಾತರಿ ಪಡಿಸಿಕೊಳ್ಳುವುದು.

6. ವರ್ಷದಲ್ಲಿ ಮೂರು ಸಲ ಅಂದರೆ ಜುಲೈ ನವೆಂಬರ್ ಹಾಗೂ ಫೆಬ್ರವರಿ ತಿಂಗಳುಗಳಲ್ಲಿ ಪೋಷಕರ ಸಭೆಗಳನ್ನು ಆಯೋಜಿಸುವುದು.

7. ಶಾಲಾ ಶಿಕ್ಷಣ ನಿಧಿ ಸ್ಥಾಪಿಸುವುದು.

ಇ) ಹೊಸದಾಗಿ ಪ್ರಾರಂಭವಾಗಿರುವ ಶಾಲೆಗಳಲ್ಲಿ ಮತ್ತು ಕೆಲವು ಶಾಲೆಗಳಲ್ಲಿ ಹಿಂದಿನ ಸಮಿತಿಗಳೇ ಮುಂದುವರೆಯಬೇಕೆಂದು ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿರುವುದರಿಂದ ಅಂತಹ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ರಚನೆಯಾಗಿರುವುದಿಲ್ಲ. ಉಳಿದಂತೆ ಸರ್ಕಾರಿ ಆದೇಶದಂತೆ ಸಮಿತಿಗಳು ರಚನೆಯಾಗಿ ಕಾರ್ಯ ನಿರ್ವಹಿಸುತ್ತಿವೆ.

ಅಕ್ಷರ ದಾಸೋಹ ಮಧ್ಯಾಹ್ನದ ಬಿಸಿ ಊಟ ಯೋಜನೆ ಬಗ್ಗೆ

3514(4080) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ಷರ ದಾಸೋಹ ಬಿಸಿ ಊಟದ ಯೋಜನೆಯನ್ನು ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ;

ಆ) ಪ್ರತಿ ಪ್ರಾಥಮಿಕ ಶಾಲೆಯ ಎಲ್ಲಾ ವರ್ಗದ ಮಕ್ಕಳಿಗೆ ಯೋಜನೆ ಅನ್ವಯಿಸುತ್ತದೆಯೇ;

ಇ) ರಾಜ್ಯದ ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಶಾಲೆಗಳ ಎಲ್ಲಾ ಮಕ್ಕಳಿಗೂ ಬಿಸಿ ಊಟದ ಯೋಜನೆ ಮಾಡುವುದು ಸರ್ಕಾರದ ಕರ್ತವ್ಯವಲ್ಲವೇ; ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?